ದಿನಾಂಕಃ31/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀಸವಾಲುಃ 2 ನೇ ಪ್ರತಿವಾದಿಯ ಪರ ಶ್ರೀ ಎನ್.ಜಿ.ಪಿ ವಕೀಲರಿಂದಃ</u>**

ನನ್ನ ಮೂಲತಃ ಊರು ಬ್ಯಾಡಗಿ. ಬ್ಯಾಡಗಿಯಲ್ಲಿ ನಾನು ಕೂಲಿಕೆಲಸ ಮಾಡುತ್ತೇನೆ. ನನಗೆ ಜಮೀನು ಇರುವುದಿಲ್ಲ. 1 ನೇ ವಾದಿ ನನಗೆ ಗೊತ್ತು. 1 ನೇ ವಾದಿ ಕೂಲಿಕೆಲಸಕ್ಕೆ ಬ್ಯಾಡಗಿಗೆ ಬರುತ್ತಿದ್ದುದ್ದರಿಂದ ನನಗೆ ಪರಿಚಯ. 2 ಮತ್ತು 3 ನೇ ವಾದಿಯರು ಸಹ ಪರಿಚಯ. ಸೋಮಿಬಾಯಿ ಕೂಲಿಕೆಲಸಕ್ಕೆ ಬಂದಾಗ ನನ್ನ ಹೆಂಡತಿಗೆ ಪರಿಚಯವಾಗಿದ್ದರು. ಆ ಮೇಲೆ ಬಾಡಿಗೆಗೆ ಮನೆ ಕೇಳುತ್ತಾ ಬಂದಾಗ ನನಗೂ ಪರಿಚಯವಾದರು. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ಹೆಂಡತಿ ಮೂಲಕ ಬಾಡಿಗೆಗೆ ಮನೆ ಕೇಳಿಕೊಂಡು ಬಂದಾಗ ಸೋಮಿಬಾಯಿ ನನಗೆ ಪರಿಚಯವಾದರು ಎಂದು ಬರೆಸಿದ್ದೇನೆ. ಆ ರೀತಿ ನಾನು ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದ ಅಂಶಗಳು ನನಗೆ ಗೊತ್ತು.

ಸೋಮಿಬಾಯಿಗೆ ಇಬ್ಬರು ಹೆಣ್ಣುಮಕ್ಕಳು ಎಂದರೆ ಸರಿ. 1 ನೇ ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 1 ನೇ ವಾದಿಯ ತಂದೆಯ ಹೆಸರು ಕಾಳ್ಯನಾಯ್ಕ ಎಂದರೆ ಗೊತ್ತಿಲ್ಲ. ಸೋಮಿಬಾಯಿಯ ಮಗಳನ್ನು 1 ನೇ ವಾದಿ ಮದುವೆಯಾಗಿದ್ದಾನೆ ಎಂದರೆ ಸರಿಯಲ್ಲ. 1 ನೇ ವಾದಿಯ ಹೆಂಡತಿಯ ಹೆಸರು ಗೊತ್ತಿಲ್ಲ. ನಾನು ಮತ್ತು 1 ನೇ ವಾದಿ ಪರಸ್ಪರ ಚೆನ್ನಾಗಿದ್ದೇವೆ ಎಂದರೆ ಸರಿ. ಸೋಮಿಬಾಯಿ ಶಿಕಾರಿಪುರದ ಊರಿನಕಡೆಯವರು ಎಂದುಗೊತ್ತು ಆದರೆ ಯಾವ ಊರಿನವರು ಎಂದು ಗೊತ್ತಿಲ್ಲ.

ಚಂದ್ರಾನಾಯ್ಕ ಮತ್ತು ಕಾಳ್ಯನಾಯ್ಕ ಯಾರೆಂದು ನನಗೆ ಗೊತ್ತಿಲ್ಲ. ಚಂದ್ರನಾಯ್ಕನ ಹೆಂಡತಿಯ ಹೆಸರು ಸೋಮಿಬಾಯಿ. ಸೋಮಿಬಾಯಿಯ ಬಾಡಿಗೆ ಮನೆಯ ನಂಬರ್ ಗೊತ್ತಿಲ್ಲ. ಸೋಮಿಬಾಯಿಯ ಮತದಾರರ ಪಟ್ಟಿಯನ್ನು ನೋಡಿಲ್ಲ. ಸೋಮಿಬಾಯಿ ಬ್ಯಾಡಗಿಯ ಯಾವ ಮೆಣೆನಕಾಯಿ ಮಂಡಿಯಲ್ಲಿ ಕೆಲಸ ಮಾಡುತ್ತಿದ್ದರು ಗೊತ್ತಿಲ್ಲ. ನಾನು ಮೆಣಸಿನಕಾಯಿ ಮಂಡಿಗೆ ಕೆಲಸಕ್ಕೆ ಹೋಗುತ್ತಿರಲಿಲ್ಲ ಆದರೆ ನನ್ನ ಹೆಂಡತಿಯವರು ಮೆಣಸಿನಕಾಯಿ ಮಂಡಿಗೆ ಕೆಲಸಕ್ಕೆ

ಹೋಗುತ್ತಿದ್ದರು. ಸೋಮಿಬಾಯಿಯವರು ಬಹಳವರ್ಷ ನಮ್ಮ ಮನೆಯ ಪಕ್ಕದಲ್ಲಿ ಬಾಡಿಗೆ ಮನೆಯಲ್ಲಿದ್ದರು. ಸೋಮಿಬಾಯಿ ಮತ್ತು ಸೋಮಿಬಾಯಿಯವರ ಗಂಡ ಯಾವಾಗ ಮರಣ ಹೊಂದಿದರು ಎಂದು ಗೊತ್ತಿಲ್ಲ.

ಚಂದ್ರನಾಯ್ಕ ಮದ್ಯಪಾನ ಮಾಡಿ ಮನೆಗೆ ಬಂದಾಗ ನಾನು ನೋಡಿದ್ದೇನೆ. ನಿರ್ದಿಷ್ಟವಾಗಿ ಯಾವ ದಿನಾಂಕದಂದು ಮದ್ಯಪಾನ ಮಾಡಿಕೊಂಡು ಬಂದಿದ್ದನೆಂದು ಹೇಳಲು ಆಗುವುದಿಲ್ಲ. ಚಂದ್ರನಾಯ್ಕ ನನಗೆ ಪರಿಚಯವಿಲ್ಲ. ದಾವಾಸ್ವತ್ತನ್ನು ನಾನು ನೋಡಿಲ್ಲ. ಚಂದ್ರನಾಯ್ಕನಿಗೆ ದಾವಾಸ್ವತ್ತು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿಯರ ಮಾತು ಕೇಳಿ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರನಾಯ್ಕ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ದಾವಾಸ್ತಿಯನ್ನು ಕಬಳಿಸುವ ಸಲುವಾಗಿ ವಾದಿಯರಿಗೆ ಸಹಾಯವಾಗಲು ಸುಳ್ಳುಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 1 ಮತ್ತು 3 ರಿಂದ 5ನೇ ಪ್ರತಿವಾದಿಗಳ ಪರ ಶ್ರೀ ಜಿ.ಎನ್.ಎಸ್ ವಕೀಲರಿಂದಃ</u>**

ಈ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. **1** ನೇ ವಾದಿಯ ತಂದೆಯನ್ನು **7-8** ವರ್ಷಗಳ ಹಿಂದೆ ನೋಡಿದ್ದೇನೆ. **1** ನೇ ವಾದಿಯ ಮನೆ ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ನಾನು ಮತ್ತು **1** ನೇ ವಾದಿ ಸುಮಾರು **25** ವರ್ಷಗಳಿಂದ ವಿಶ್ವಾಸದಿಂದ ಇದ್ದೇವೆ. **1** ನೇ ವಾದಿಗೆ ಜಮೀನು ಮನೆ ಇರುವ ಬಗ್ಗೆ ನಾನು ವಿಚಾರ ಮಾಡಿಲ್ಲ. ನನ್ನ ಮುಖ್ಯವಿಚಾರಣೆ ಪ್ರಮಣಪತ್ರದಲ್ಲಿರುವ ವಿಚಾರಗಳನ್ನು ನನ್ನ ಸ್ವಂತ ತಿಳುವಳಿಕೆಯಿಂದ ಹೇಳಿದ್ದೇನೆ. **1** ನೇ ವಾದಿಯ ನನಗೆ ಪರಿಚಯವಿರುವುದರಿಂದ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಇನ್ನುಳಿದಂತೆ ಮೇಲ್ಕಂಡ ಪಾಟೀಸವಾಲನ್ನೆ ಅಳವಡಿಸಿಕೊಳ್ಳಲು ವಕೀಲರು ಮನವಿ ಮಾಡಿದ್ದರಿಂದ ಅವರ ಮನವಿಯನ್ನು ಪುರಸ್ಕರಿಸಿ ಅಳವಡಿಸಿಕೊಳ್ಳಲಾಯಿತು. )**

**ಮರುವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ.ಕೇ.ಸ.ಇ.ಎ.ಒ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,
ಶಿಕಾರಿಪುರ.